SC:102/2024
PW: 01 CW:01

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 102/2024

| | |
|---|---|
| PW | 01 |
| CW | 01 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 09.10.2025.

| | | |
|---|---|---|
| ಸಾಕ್ಷಿಯ ಹೆಸರು | : | ಮೊಹಮದ್ ಯೂಸುಫ್ |
| ತಂದೆಯಹೆಸರು | : | ನಜೀರ್ ಅಹಮದ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಕಿಯಾ ಕಂಪನಿಯಲ್ಲಿ ಕೆಲಸ |
| ವಾಸಸ್ಥಳ | : | ಹಂಪಸಂದ್ರ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ನಜೀರ್ ಅಹಮದ್ ಇವರು ನನ್ನ ತಂದೆ ಆಗಿದ್ದು ಮಹಬೂಬ್ ಸಾಬ್ ಇವರು ನನ್ನ ಅಜ್ಜ ಆಗಿರುತ್ತಾರೆ. ಚಾಸಾ.2 ರವರು ನನ್ನ ಚಿಕ್ಕ ತಾತನ ಹೆಂಡತಿ ಆಗಿದ್ದು, ಚಾಸಾ.3 , 4 ರವರ ಪರಿಚಯ ಇದ್ದು ಚಾಸಾ.5 ನನ್ನ ಭಾವನಾಗಿದ್ದು , ಚಾಸಾ.6 ರಿಂದ 26 ರವರ ಪರಿಚಯ ಇರುತ್ತದೆ. ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಿರುವ ಆರೋಪಿ ನನ್ನ ಚಿಕ್ಕ ತಾತ ಆಗಿರುತ್ತಾರೆ.

2. ನನ್ನ ತಾತನ ತಂದೆಗೆ ಒಟ್ಟು 4 ಜನ ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಜನಿಸಿರುತ್ತಾರೆ. ನನ್ನ ತಂದೆಗೆ ನಾನು ಹಾಗೂ ನನ್ನ ಅಣ್ಣ ಗಂಡು ಮಕ್ಕಳಾಗಿದ್ದು ಇಬ್ಬರು ಹೆಣ್ಣುಮಕ್ಕಳು ಇರುತ್ತಾರೆ. ನನ್ನ ಅಜ್ಜನ ಕಾಲದಲ್ಲಿ ನಮ್ಮ ಕುಟುಂಬದ ಜಮೀನಿನ ಬಗ್ಗೆ ವಿಭಾಗ ಆಗಿತ್ತು. ದಿ.24.07.2024 ರಂದು ಬೆಳಗ್ಗೆ 5.15 ರ ಸಮಯದಲ್ಲಿ ನನ್ನ ತಂದೆ ಸ್ಥಳದಲ್ಲಿ ಮೃತ ಪಟ್ಟಿದ್ದು ನನ್ನ ತಾತ ನಿಮಾನ್ಸ್ ಆಸ್ಪತ್ರೆಯಲ್ಲಿ ಅದೇ ದಿನ ಬೆಃ 11.00 ಗಂಟೆಯಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ನಜೀರ್ ಅಹಮದ್ ವ್ಯವಸಾಯ ಮಾಡುತ್ತಿದ್ದರು. ನಾನು ಹಾಗೂ ನನ್ನ ಕುಟುಂಬಸ್ಥರು ಎಲ್ಲರೂ ಹಂಪಸಂದ್ರದಲ್ಲಿ ವಾಸ ಮಾಡುತ್ತಿದ್ದೇವೆ. ಆರೋಪಿ ಹಾಗೂ ಅವರ ಕುಟುಂಬಸ್ಥರು ಮೊದಲಿಗೆ ಹಂಪಸಂದ್ರದಲ್ಲಿ ವಾಸವಾಗಿದ್ದು ನಂತರ ಆರೋಪಿಯ ಹೆಂಡತಿ ಮಕ್ಕಳು ಬಾಗೇಪಲ್ಲಿಯಲ್ಲಿ ವಾಸ ಮಾಡಲು ಪ್ರಾರಂಭಿಸಿದ್ದು ಆರೋಪಿಯು ಮಾತ್ರ ನಮ್ಮ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು.

3. ಆರೋಪಿ ಸುಮಾರು 20 ವರ್ಷಗಳ ಕಾಲ ಸೌದಿ ಅರೇಬಿಯಾದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದು, ಕಳೆದ 7 ವರ್ಷಗಳಿಂದ ಹಂಪಸಂದ್ರ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ. ದಿ.24.07.2024 ರಂದು ಬೆಃ 5.15 ರ ಸಮಯದಲ್ಲಿ ನನ್ನ ತಂದೆ ನಜೀರ್ ಅಹಮದ್ ಇವರು ನಮಾಜ್ ಗೆ ಎಂದು ಮಸೀದ್ ಗೆ ಹೋಗುವುದಾಗಿ ಮನೆಯಿಂದ ಹೋಗಿರುತ್ತಾರೆ. ನನ್ನ ತಂದೆ ಮನೆಯಿಂದ ಹೊರಟ 4 ಅಥವಾ 5 ನಿಮಿಷಗಳಲ್ಲಿ ಜೋರಾಗಿ ಪಟಾಕಿ ಹೊಡೆದಂತಹ ಶಬ್ಧ ಕೇಳಿಸಿದ್ದು ನಾನು ಹೊರಗೆ ಬಂದು ನೋಡಿದಾಗ ಆರೋಪಿ ಒಂದು ದ್ವಿಚಕ್ರ ವಾಹನದಲ್ಲಿ ಬಸ್ ನಿಲ್ದಾಣದ ಕಡೆ ಹೋಗುವುದು ಕಂಡು ಬಂದಿರುತ್ತದೆ. ಆ ಸಮಯದಲ್ಲಿ ನನ್ನ ತಾತನಾದ ಮಹಬೂಬ್ ಸಾಬ್ ಇವರ ಮನೆಯ ಕಡೆಯಿಂದ ಜೋರಾಗಿ ಕಿರುಚಾಡಿದ ಶಬ್ಧ ಕೇಳಿಸಿರುತ್ತದೆ. ನಾನು ನನ್ನ ತಾತನ ಮನೆಗೆ ಹೋಗಿ ನೋಡಿದಾಗ ನನ್ನ

ತಾತನ ಎಡ ತಲೆಗೆ ಜೋರಾಗಿ ಪೆಟ್ಟಾಗಿ ರಕ್ತ ಸೋರುತ್ತಿದ್ದು, ಒಂದು ಮಚ್ಚು ಪಕ್ಕದಲ್ಲಿ ಬಿದ್ದಿತ್ತು.

4. ನಾನು ಅಲ್ಲಿಂದ ಮುಂದನೆ ಬಂದಾಗ ಆರೋಪಿಯ ಮನೆಯ ಮುಂಭಾಗದ ಸಿಮೆಂಟ್ ರಸ್ತೆಯಲ್ಲಿ ನನ್ನ ತಂದೆ ಬಿದ್ದಿರುವುದು ಕಂಡು ಬಂದಿತು. ನಾನು ಹತ್ತಿರ ಹೋಗಿ ನೋಡಿದಾಗ ನನ್ನ ತಂದೆಯ ಬಲ ಭುಜದ ಹತ್ತಿರ ಒಂದು ತೂತು ಬಿದ್ದಿದ್ದು ರಕ್ತ ಸೋರುತ್ತಿದ್ದು, ನನ್ನ ತಂದೆಯ ಎಡ ಹುಬ್ಬಿನ ಹತ್ತಿರ ಸೀಳಿದಂತಹ ಗಾಯವಾಗಿ ರಕ್ತಸ್ರಾವವಾಗುತ್ತಿತ್ತು. ಸ್ಥಳದಲ್ಲಿ ನನ್ನ ತಂದೆ ಮೃತ ಪಟ್ಟಿದ್ದರು. ನಾನು ಪುನಃ ನನ್ನ ಅಜ್ಜನಾದ ಮಹಬೂಬ್ ಸಾಬ್ ಇವರ ಬಳಿ ಬಂದು ವಿಚಾರಿಸಿದಾಗ ಆ ದಿನ ನನ್ನ ತಂದೆ ನಮಾಜ್ ಗೆ ಹೋಗುತ್ತಿದ್ದಾಗ ಆರೋಪಿ ಯಾವುದೋ ಪಿಸ್ತೂಲ್ ನಿಂದ ನನ್ನ ತಂದೆಯ ಹಿಂಭಾಗದಿಂದ ಗುಂಡು ಹಾರಿಸಿದ್ದು, ಒಂದು ಮಚ್ಚಿನಿಂದ ನನ್ನ ತಂದೆಗೆ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು ಘಟನೆಯನ್ನು ನೋಡಿದ ನನ್ನ ತಾತ ಜೋರಾಗಿ ಕಿರುಚಿಕೊಂಡಾಗ ಆರೋಪಿ ಅದೇ ಮಚ್ಚಿನಿಂದ ನನ್ನ ತಾತನಿಗೆ ಹಲ್ಲೆ ಮಾಡಿದ ವಿಚಾರವನ್ನು ನನ್ನ ತಾತ ನನಗೆ ತಿಳಿಸಿದರು. ನಂತರ ನನ್ನ ತಾತನನ್ನು ಫೀರ್ ಅಹಮದ್ ಮತ್ತು ಯಾಸೀನ್ ಎನ್ನುವವರು ಕಾರಿನಲ್ಲಿ ಗುಡಿಬಂಡೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ.

5. ನನ್ನ ತಾತನಿಗೆ ಗಂಭೀರ ಸ್ಥಿತಿ ಇದ್ದ ಕಾರಣ ಅವರನ್ನು ಚಿಕ್ಕಬಳ್ಳಾಪುರ ಆಸ್ಪತ್ರೆಗೆ ಕರೆದುಕೊಂಡ ಹೋದ ಬಗ್ಗೆ ನನಗೆ ಮಾಹಿತಿ ಬಂದಿರುತ್ತದೆ. ನಂತರ ನನ್ನ ಭಾವನಾದ ರಫೀಕ್ ರವರು ನನ್ನ ತಾತನನ್ನು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದ ವಿಚಾರ ನನಗೆ ತಿಳಿದು ಬಂತು . ನನ್ನ ತಂದೆ ಸ್ಥಳದಲ್ಲಿ ಬಿದ್ದಿದ್ದು ಮನೆಯಿಂದ ತಲೆದಿಂಬು, ಬೆಡ್ ಶೀಟ್ ಹಾಗೂ ಕರ್ಚಿಫ್ ತಂದು ನನ್ನ ತಂದೆಯ ದೇಹದ ಮೇಲೆ ಹೊದಿಸಿರುತ್ತೇವೆ. ನಂತರ

ಪೊಲೀಸರು ಕೃತ್ಯ ಸ್ಥಳಕ್ಕೆ ಬಂದು ಪರಿಶೀಲಿಸಿದ್ದು ಅದಾದ ಮೇಲೆ ನಾನು ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ . ಸಾಕ್ಷಿದಾರರು ತಾನು ನೀಡಿದ ದೂರು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1, ನಿಪಿ 1(ಎ) ಎಂದು ಗುರುತಿಸಲಾಯಿತು.

6. ನಂತರ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಕ್ರಮ ಜರುಗಿಸಿದ್ದು ಸಾಕ್ಷಿದಾರರು ಕೃತ್ಯ ಸ್ಥಳದ ಪಂಚನಾಮೆ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2, ನಿಪಿ 2(ಎ) ಎಂದು ಗುರುತಿಸಲಾಯಿತು. ನನ್ನ ತಾತ ಮೃತ ಪಟ್ಟ ನಂತರ ನಾನು ಅದೇ ದಿನ ಮಧ್ಯಾಹ್ನ ಮತ್ತೊಂದು ದೂರನ್ನು ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿದಾರರು ಸದರಿ ದೂರು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3, ನಿಪಿ 3(ಎ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳಕ್ಕೆ ಬಂದಾಗ ನಾನೇ ಸ್ಥಳವನ್ನು ತೋರಿಸಿದ್ದು ಆ ಸಮಯದಲ್ಲಿ ನನ್ನ ತಾತನ ಮನೆಯ ಕಾಂಪೌಂಡ್ ಒಳಗಡೆ ಬಿದ್ದಿದ್ದ ರಕ್ತ ಹಾಗೂ ಮಚ್ಚನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ. ನನ್ನ ತಂದೆ ಬಿದ್ದಿದ್ದ ಆರೋಪಿಯ ಮನೆಯ ಮುಂದಿನ ರಸ್ತೆಯಲ್ಲಿ ಬಿದ್ದಿದ್ದ ರಕ್ತವನ್ನು ಹಾಗೂ ನನ್ನ ಅಪ್ಪನಿಗೆ ಹೊಡೆದಿದ್ದ ಗುಂಡನ್ನು ಹುಡುಕಿ ಪೊಲೀಸರು ಜಪ್ತಿ ಪಡಿಸಿರುತ್ತಾರೆ. ಪೊಲೀಸರು ನನ್ನ ತಂದೆ ಧರಿಸಿದ್ದ ಬಟ್ಟೆಗಳನ್ನು, ನಾವು ಹೊದಿಸಿದ್ದ ಬೆಡ್ ಶೀಟ್, ತಲೆದಿಂಬು ಹಾಗೂ ಕರ್ಚಿಫ್ ಅನ್ನು ಜಪ್ತು ಪಡಿಸಿದ್ದು ಅವುಗಳನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸೀಲ್ ಆದ ಬಟ್ಟೆ ಕವರ್ ಗಳನ್ನು ತೆರೆದು ಅದರಲ್ಲಿರುವ ವಸ್ತುಗಳನ್ನು ಸಾಕ್ಷಿದಾರರಿಗೆ ತೋರಿಸಲು ಅನುಮತಿ ಕೋರಿದ್ದು

ನೀಡಲಾಯಿತು. ಅದರಂತೆ ನ್ಯಾಯಾಲಯದ ಮುಂದೆ ಇರುವ ಸೀಲಾದ ಕವರ್ ಗಳನ್ನು ತೆರೆದು ಸಾಕ್ಷಿದಾರರಿಗೆ ಸದರಿ ವಸ್ತುಗಳನ್ನು ತೋರಿಸಿರುತ್ತದೆ.

7. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಒಂದು ಕಾಡತೂಸು, ಒಂದು ಜೀವಂತ ಕಾಡತೂಸು, ಒಂದು ಕಬ್ಬಿಣದ ಮಚ್ಚು, ಸಂಗ್ರಹಿಸಿದ 5 ರಕ್ತದ ಕಲೆಗಳು, ಒಂದು ಕಂದು ಬಣ್ಣದ ಚಪ್ಪಲಿಗಳು, ಒಂದು ಬೆಡ್ ಶೀಟ್, ಒಂದು ತಲೆದಿಂಬು ಹಾಗೂ ಕರ್ಚಿಫ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ರಿಂದ ಮು.ಮಾ 12 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಸ್ಥಳದಲ್ಲಿ ಹಾಜರಿದ್ದ ಚಾಸಾ 11 ಮತ್ತು ಚಾಸಾ 12 ರವರು ನಿಪಿ 2 ಮಹಜರ್ ಗೆ ಸಹಿ ಮಾಡಿರುತ್ತಾರೆ.

8. ಕೃತ್ಯದ ದಿನ ನನ್ನ ತಂದೆ ಹಾಗೂ ನನ್ನ ತಾತ ಧರಿಸಿದ್ದ ಬಟ್ಟೆಗಳನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದ ಸೀಲಾದ ಕವರ್ ಗಳನ್ನು ಓಪನ್ ಮಾಡಿ ಅದರಲ್ಲಿರವ ವಸ್ತುಗಳನ್ನು ಸಾಕ್ಷಿದಾರರಿಗೆ ತೋರಿಸಿದ್ದು ಅದರಂತೆ ಸಾಕ್ಷಿದಾರರು ಒಂದು ರಕ್ತದ ಕಲೆಯಾಗಿದ್ದ ಹಸಿರು ಬಣ್ಣದ ಜುಬ್ಬಾ, ಒಂದು ಬನಿಯನ್, ಒಂದು ಪಂಚೆ, ಒಂದು ಒಳ ಉಡುಪು, ಸಂಗ್ರಹಸಿದ್ದ ಸ್ವಾಬ್ ನೋಡಿ ಗುರುತಿಸಿದ್ದು, ಸದರಿ ಬಟ್ಟೆಗಳನ್ನು ಕೃತ್ಯದ ದಿನ ನನ್ನ ತಂದೆ ಧರಿಸಿದ್ದ ಬಟ್ಟೆಗಳೆಂದು ಸಾಕ್ಷಿ ನುಡಿದಿದ್ದು ಅವುಗಳನ್ನು ಮು.ಮಾ.13 ರಿಂದ ಮು.ಮಾ 17 ಎಂದು ಗುರುತಿಸಲಾಯಿತು.

9. ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದ ಸೀಲಾದ ಕವರ್ ಗಳನ್ನು ಓಪನ್ ಮಾಡಿ ಅದರಲ್ಲಿರವ ವಸ್ತುಗಳನ್ನು ಸಾಕ್ಷಿದಾರರಿಗೆ ತೋರಿಸಿದ್ದು ಅದರಂತೆ ಸಾಕ್ಷಿದಾರರು ರಕ್ತದ ಕಲೆಯಾಗಿದ್ದ ಒಂದು ಜುಬ್ಬಾ, ಒಂದು ಸ್ವೆಟರ್, ಒಂದು ಬನಿಯನ್, ಒಂದು ಒಳ

ಉಡುಪು ನೋಡಿ ಗುರುತಿಸಿದ್ದು, ಸದರಿ ಬಟ್ಟೆಗಳನ್ನು ಕೃತ್ಯದ ದಿನ ನನ್ನ ತಾತ ಧರಿಸಿದ್ದ ಬಟ್ಟೆಗಳೆಂದು ಸಾಕ್ಷಿ ನುಡಿದಿದ್ದು ಅವುಗಳನ್ನು ಮು.ಮಾ.18 ರಿಂದ ಮು.ಮಾ 21 ಎಂದು ಗುರುತಿಸಲಾಯಿತು.

10. ಪೊಲೀಸರು ಆ ದಿನ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿದ್ದು ಅವುಗಳನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ತನ್ನ ತಂದೆ ಹಾಗೂ ಅಜ್ಜನ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 4 ರಿಂದ ನಿಪಿ 10 ಎಂದು ಗುರುತಿಸಲಾಯಿತು. ಆರೋಪಿ ಮೊದಲಿಂದಲೂ ಜಮೀನುಗಳನ್ನು ಸರಿಯಾಗಿ ವಿಭಾಗ ಮಾಡಿಲ್ಲ ಎಂದು ಹೇಳಿ ನನ್ನ ತಂದೆ ಹಾಗೂ ತಾತನೊಂದಿಗೆ ಆಗಾಗ ಗಲಾಟೆ ಮಾಡುತ್ತಿದ್ದು, ಇದೇ ವಿಚಾರವಾಗಿ ಆರೋಪಿ ಈ ಕೃತ್ಯ ಎಸೆಗಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಮ್.ವಿ. ವಕೀಲರಿಂದಃ</u>**

ಶ್ರೀ ಎಮ್ . ವಿ. ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 09.10.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

sd/-
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.